# ವಾರ್ಡ್ ಸಭೆ ಸಂಖ್ಯೆ.08

ದಿನಾಂಕ: 16.01.2021 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (ಅಧ್ಯಕ್ಷರು)
2. ಶ್ರೀ ರಾಮದಾಸಪ್ಪ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರಂ ಉಪವಿಭಾಗ.
3. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
4. ಶ್ರೀ ಜಯಪಾಲ್ ಸದಸ್ಯರು.
5. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
6. ಶ್ರೀಮತಿ ಪ್ರೇಮ ಸದಸ್ಯರು.
7. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
8. ಶ್ರೀ ರಾಜೇಶ್ ಸದಸ್ಯರು.
9. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
10. ಶ್ರೀ ಗೋಪಿ ಸದಸ್ಯರು.
11. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
15. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು, ಬೆಸ್ಕಾಂ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
16. ಶ್ರೀ ಆನಂದ್ ಪಶು ಸಂಗೋಪನ ಪರಿವೀಕ್ಷಕರು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
17. ಶ್ರೀ ಪ್ರಶಾಂತ್ ಎನ್, ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
18. ಶ್ರೀ ಮಹಾಲಕ್ಷ್ಮೀಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು.
2. ಮಾನ್ಯ ಅಧ್ಯಕ್ಷರು ರವರು ಸೋಮೇಶ್ವರ ನಗರದ ಸ್ಯಾನಿಟರಿ ಲೈನ್ ಸಮಸ್ಯೆ ಬಗ್ಗೆ ಕೇಳಿದರು ಶ್ರೀ ಗೋಪಿ ಸದಸ್ಯರು ಕಾಮಗಾರಿ ಪ್ರಾರಂಭಿಸಿರುತ್ತಾರೆ ಎಂದು ತಿಳಿಸಿದರು.

Scanned with CamScanner

3. ವಾರ್ಡ್ ಅಭಿಯಂತರರು ಬೆಸ್ಕಾಂ ಅಧಿಕಾರಿಗಳಿಗೆ ತಾವು ರಸ್ತೆಗಳನ್ನು ಅಗೆಯುತ್ತಿರುತ್ತೀರಿ, ರಸ್ತೆ ಅಗೆತವನ್ನು ಮಾಡಲು ಅನುಮತಿ ಪಡೆದಿರುವ ದಾಖಲೆಗಳನ್ನು ನೀಡುವಂತೆ ಸಭಾ ಸೂಚನ ಪತ್ರದಲ್ಲಿ ಸೂಚಿಸಲಾಗಿತ್ತು ಅದರಂತೆ ದಾಖಲೆಗಳನ್ನು ನೀಡಿ ಎಂದು ತಿಳಿಸಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು.
4. ಮಾನ್ಯ ಅಧ್ಯಕ್ಷರು ರವರು ವಾರ್ಡ್‌ನಲ್ಲಿ ಸುಮಾರು 15 ದಿನಗಳಿಂದ ನೀರಿನ ಸಮಸ್ಯೆ ಇರುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ ಸಮಸ್ಯೆ ಪರಿಹಾರ ಆಗಿದೆಯ ಎಂದು ಸಭೆಯಲ್ಲಿ ಕೇಳಿದರು ಇದಕ್ಕೆ ಬೆಸ್ಕಾಂ ಅಧಿಕಾರಿ ರವರು ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ತಿಳಿಸಿದರು.
5. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಬೆಸ್ಕಾಂ ರವರು ಕೇಬಲ್ ಅಳವಡಿಸಲು ರಸ್ತೆ ಅಗೆತವನ್ನು ಮಾಡಿರುವ ಗುಂಡಿಗಳನ್ನು ಈ ಕೂಡಲೇ ಮುಚ್ಚಬೇಕು ಎಂದು ಸೂಚಿಸಿಲಾಗಿರುತ್ತದೆ. ಅಗೆದ ಗುಂಡಿಗಳನ್ನು ಮುಚ್ಚಲು ದಿನಾಂಕ:10.01.2021 ರವರೆಗೆ ಕಾಲವಕಾಶವನ್ನು ಪಡೆದುಕೊಂಡಿರುತ್ತೀರಿ, ಅದರಂತೆ ಅಗೆದ ಗುಂಡುಗಳನ್ನು ಮುಚ್ಚಲಾಗಿದೆಯೇ ಎಂದು ಕೇಳಿದರು. ಇದಕ್ಕೆ ಬೆಸ್ಕಾಂ ಅಧಿಕಾರಿ ರವರು ಇನ್ನೂ 15 ದಿನಗಳ ಕಾಲಾವಕಾಶ ಬೇಕು ಎಂದು ತಿಳಿಸಿದರು.
6. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್‌ನಲ್ಲಿ ವಿದ್ಯುತ್‌ಕಂಬಗಳಿಂದ ಜೋತು ಬಿದ್ದ ಕೇಬಲ್‌ಗಳನ್ನು ತಗಿಸುವಂತೆ ಈ ಹಿಂದೆ ಸೂಚಿಸಲಾಗಿರುತ್ತದೆ ಇದಕ್ಕೆ ಸಂಬಂಧಿಸದಂತೆ ಕೈಗೊಂಡ ಕ್ರಮದ ಬಗ್ಗೆ ಕೇಳಿದರು. ಇದಕ್ಕೆ ಬೆಸ್ಕಾಂ ಅಧಿಕಾರಗಳು ಕೇಬಲ್‌ಗಳನ್ನು ತೆರವುಗೊಳಿಸಲು ಬೀದಿ ದೀಪಗಳ ಗುತ್ತಿಗೆದಾರರು ಸಹ ಬರಬೇಕು ಎಂದು ಕೋರಿದರು ಇದಕ್ಕೆ ವಾರ್ಡ್ ಅಭಿಯಂತರರು ಸಂಬಂದಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.
7. ಮಾನ್ಯ ಅಧ್ಯಕ್ಷರು ಕಂದಾಯ ವಸೂಲಿಗಾರರಿಗೆ ವಾರ್ಡ್‌ನಲ್ಲಿ ಒಟ್ಟು ಎಷ್ಟು ಕಟ್ಟಡಗಳಿವೆ, ಎಷ್ಟು ಖಾಲಿ ನಿವೇಶನಗಳಿವೆ ಎಂಬ ಮಾಹಿತಿಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೀಡಲು ಸೂಚಿಸಲಾಗಿರುತ್ತದೆ ಮಾಹಿತಿಯನ್ನು ನೀಡಿರುತ್ತೀರ ಎಂದು ಸಭೆಯಲ್ಲಿ ಕೇಳಿದರು ಆದರೆ ಕಂದಾಯ ವಸೂಲಿಗಾರರು ಹಾಜರಿರಲಿಲ್ಲ.
8. ಮಾನ್ಯ ಅಧ್ಯಕ್ಷರು ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್‌ನಲ್ಲಿ ಒಂದು ಮನೆಗೆ ಒಂದು ಮೀಟರ್‌ನನ್ನು ಅಳವಡಿಸಿರುತ್ತೀರಿ ಅದರಂತೆ ಒಟ್ಟು ಎಷ್ಟು ಮನೆಗಳಿವೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವಂತೆ ಹಿಂದಿನ ಸಭೆಯಲ್ಲಿ ಸೂಚಿಸಲಾಗಿರುತ್ತದೆ ಆದ್ದರಿಂದ ಮಾಹಿತಿಯನ್ನು ನೀಡುವಂತೆ ತಿಳಿಸಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಕೆಲವು ದಿನಗಳ ಕಾಲವಕಾಶ ಬೇಕು ಎಂದು ತಿಳಿಸಿದರು.
9. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ಈಶ್ವರ ದೇವಸ್ಥಾನದ ಹತ್ತಿರ ಕೊಳವೆ ಬಾವಿ ನೀರು ಕೃಷ್ಣಪ್ಪ ಎಂಬುವರ ಮನೆಗೆ ಮಾತ್ರ ನೀರು ಹೋಗಿತ್ತಿದೆ ಉಳಿಕೆ ಮನೆಗಳಿಗೆ ನೀರು ಬರುತ್ತಿಲ್ಲ ಎಂದು ಸಭೆಗೆ ತಿಳಿಸಿರುತ್ತಾರೆ ಇದಕ್ಕೆ ತೆಗದು ಕೊಂಡ ಕ್ರಮದ ಬಗ್ಗೆ ಕೇಳಿದರು ಇದಕ್ಕೆ ವಾರ್ಡ್ ಅಭಿಯಂತರರು ಯಾವ ಕೊಳವೆ ಬಾವಿಯಿಂದ ನೀರು ಹೊಗುತ್ತಿದೆ ಎಂದು ಗುರುತಿಸಲಾಗಿದ್ದು, ಸದರಿ ಕೊಳವೆ ಬಾವಿಯಿಂದ ಕಡಿಮೆ ನೀರು ಬರುತ್ತಿರುತ್ತದೆ ಆದ್ದರಿಂದ ಬೇರೆ ಮನೆಗಳಿಗೆ ಹೋಗುತ್ತಿರುವುದಿಲ್ಲ ಎಂದು ತಿಳಿಸಿದರು.
10. ಸಾರ್ವಜನಿಕರು ರವರು ಬೀದಿ ಬದಿ ವ್ಯಾಪಾರಿಗಳು ಶಂಕರನಗರದ ಮುಖ್ಯರಸ್ತೆಯಲ್ಲಿ ಮುಂಜಾನೆ ಗಲಾಟೆ ಮಾಡುತ್ತಿರುತ್ತಾರೆ ಇದರಿಂದ ಶಂಕರನಗರದ ಮುಖ್ಯರಸ್ತೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದರು ಇದಕ್ಕೆ ಶ್ರೀ ರಾಜೇಶ್ ಸದಸ್ಯರು ರವರು ಸದರಿ ವಷಯವು ಮಾನ್ಯ ಸಚಿವರ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.

Scanned with CamScanner

11. ಸಾರ್ವಜನಿಕರು ರಾಜೀವ್‌ಗಾಂಧಿನಗರದ ಹತ್ತಿರ ರಸ್ತೆಯಲ್ಲಿ ಹೋಗುತ್ತಿರುವ ಒಬ್ಬ ವ್ಯಕ್ತಿಯ ಮೇಲೆ ಕೆಲವು ಪುಂಡರು ಹಲ್ಲೆ ಮಾಡಿರುತ್ತಾರೆ ಮತ್ತು ಸ್ಥಳೀಯ ಮಹಿಳೆಯರಿಗೆ ತುಂಬ ತೊಂದರೆಯನ್ನು ಉಂಟು ಮಾಡುತ್ತಿರುತ್ತಾರೆ ಆದ್ದರಿಂದ ಸದರಿ ಪ್ರದೇಶದಲ್ಲಿ ಬೀದಿ ದೀಪಗಳನ್ನು ಮತ್ತು ಸಿ.ಸಿ ಕ್ಯಾಮರಗಳನ್ನು ಅಳವಡಿಸುವಂತೆ ಕೋರಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು [illegible] ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ತಿಳಿಸಿದರು.

12. ಸದಸ್ಯರು 6ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆಯಲ್ಲಿ ಮ್ಯಾನ್ ಹೋಲ್ ಪಕ್ಕ ರಸ್ತೆ ಕುಸಿಯುತ್ತಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಈ ಸಮಸ್ಯೆಯನ್ನು ಪರಿಹರಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿದರು.

13. ಶ್ರೀ ಜಯಪಾಲ್ ರವರು ಆರ್‌ಎಂಸಿ ಯಾರ್ಡ್ ಹತ್ತಿರ ಗೋಡೆಯು ಕುಸಿಯುವ ಮಟ್ಟದಲ್ಲಿರುತ್ತದೆ, ಇದರಿಂದ ಗೋಡೆಯ ಕುಸಿದರೆ ಪಕ್ಕದಲ್ಲಿ ಕಟ್ಟಡಗಳಲ್ಲಿ ವಾಸವಾಗಿರುವ ನಿವಾಸಿಗಳಿಗೆ ತುಂಬ ತೊಂದರೆಯಾಗುತ್ತದೆ ಆದ್ದರಿಂದ ಗೋಡೆಯನ್ನು ತೆರವುಗೊಳಿಸುವಂತೆ ಕೋರಿದರು. ಇದಕ್ಕೆ ಅಭಿಯಂತರರು ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ತಿಳಿಸಿದರು.

14. ಕಾರ್ಯದರ್ಶಿಗಳು ಟೊಯೋಟ ಶೋರೂಂ ಹತ್ತಿರ ಶೆಡ್‌ಗಳನ್ನು ಮುಂದಿನ ವಾರದಲ್ಲಿ ತೆರವುಗೊಳಿಸೋಣ ಎಂದು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ತಿಳಿಸಿದರು.

15. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**

K. Suvarnaprabha

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner